पावर ग्रिड कॉर्पोरेशन ऑफ इंडिया लिमिटेड
(भारत सरकार का उद्यम)

**POWER GRID CORPORATION OF INDIA LIMITED**
(A Government of India Enterprise)

**Registered Post with Acknowledgement Due**

Ref: SR-II: RTI:F-1371:22-23

Date: 20th July, 2022

Shri Rajesh N,
Gangapura Village,
Tavarekere Post,
Hosakote Taluk
**Bangalore Rural 562 122.**

**Sir,**

**Sub: Information sought under RTI Act, 2005 – reg.**

This has reference to your application dated 21/05/2022 under RTI Act, 2005 received at this office on 16/06/2022.

Q.No.1 & 4 is not applicable to POWERGRID. Further, with respect to Q.No.3, please be informed that reply can be provided only on clear and specific query.

Information against Q.No.2 is attached herewith as Annexure-A.

As per section 19 of the Right to Information Act 2005, if required, you may file an appeal to the First Appellate Authority of the organisation within 30 days of the issue of this order. The address of the First Appellate Authority is given below:

Shri Tarun Bajaj,
Executive Director (SRTS-II)
Power Grid Corporation of India Ltd.,
Singanayakanahalli, Yelahanka Hobli,
Bangalore 560 064.
e-mail : sr2edo@powergrid.co.in
Tel.No.: 080-23093701

Thanking you,

Yours faithfully,

20/7/22

(K.V.SATYANARAYANA)
Sr.General Manager & CPIO
e-mail id: sr2cpio@powergrid.co.in
Tel.No.: 080-23093711

Encl.: As above

Copy to: ED(SRTS-II), Appellate Authority, POWERGRID, SRTS-II, Bangalore - for kind information.

Annexure - A
ANN - A-1

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ

1ನೆ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು-01

ಫ್ಯಾಕ್ಸ್: 080-22860220 ದೂರವಾಣಿ: 080-22860412 ಇ-ಮೇಲ್:deo.bangalorer@gmail.com

ನಂ.ಎಡಿಎಂ.ಮಿಸ್.ಸಿಆರ್.91/13-14 ದಿನಾಂಕ 08-08-2014.

## ಅಧಿಕೃತ ಜ್ಞಾಪನ

ವಿಷಯ: ಮೆ॥ ಪವರ್ ಗ್ರಿಡ್ ಕಾರ್ಪೊರೇಷನ್ ರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹಾದು ಹೋಗುತ್ತಿರುವ 765 ಕೆ.ವಿ. ಮತ್ತು 400 ಕೆ.ವಿ ಪವರ್‌ಲೈನ್‌ಗಳ ಸ್ಥಾಪನೆಗಾಗಿ ರೈತರಿಗೆ ಪರಿಹಾರ ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ನಡವಳಿ ದಿನಾಂಕ 08-08-2014.

***

1) ಮೆ॥ ಪವರ್ ಗ್ರಿಡ್ ಕಾರ್ಪೊರೇಷನ್ ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಕೆಳಕಾಣಿಸಿದ ಪವರ್‌ಲೈನ್ ನಿರ್ಮಾಣ ಮಾಡಲು ಉದ್ದೇಶಿಸಿರುತ್ತಾರೆ.

i) 400 k.v D/C ಮಧುಗಿರಿ – ಯಲಹಂಕ ಲೈನ್.

ii) 765 k.v D/C ಮಧುಗಿರಿ– ಧರ್ಮಪುರಿ (ತಮಿಳುನಾಡು) ಲೈನ್.

2) ಈ ಮೇಲ್ಕಾಣಿಸಿದ ಪವರ್‌ಲೈನ್ ಹಾದು ಹೋಗುವ ಜಮೀನಿನ ಮಾಲೀಕರು ಹೆಚ್ಚುವರಿ ಪರಿಹಾರ ನೀಡಲು ಒತ್ತಾಯಿಸಿ ಪವರ್‌ಲೈನ್ ನಿರ್ಮಾಣ ಮಾಡುವ ಕಾರ್ಯಕ್ಕೆ ತಡೆಯೊಡ್ಡುತ್ತಿದ್ದಾರೆಂದು ಮೆ॥ಪವರ್ ಗ್ರಿಡ್ ಕಾರ್ಪೊರೇಷನ್ ಅಧಿಕಾರಿಗಳು ವರದಿ ಮಾಡಿರುತ್ತಾರೆ.

3) ಜಮೀನುಗಳ ಮಾಲೀಕರು, ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಮತ್ತು ಮೆ॥ ಪವರ್ ಗ್ರಿಡ್ ಕಾರ್ಪೊರೇಷನ್‌ನ ಅಧಿಕಾರಿಗಳೊಂದಿಗೆ ವಿವಿಧ ದಿನಾಂಕಗಳಲ್ಲಿ ಪರಿಹಾರ ನಿಗಧಿಪಡಿಸುವ ಬಗ್ಗೆ ಅನೇಕ ಸಭೆಗಳನ್ನು ನಡೆಸಲಾಗಿರುತ್ತದೆ. ಅಂತಿಮವಾಗಿ ದಿನಾಂಕ 08-08-2014 ರಂದು ನಡೆದ ಸಭೆಯಲ್ಲಿ ಚರ್ಚಿಸಿ, ಜಮೀನುಗಳ ಮಾಲೀಕರುಗಳಿಗೆ ನೀಡಬಹುದಾದ ಪರಿಹಾರದ ಬಗ್ಗೆ ಅಂತಿಮವಾಗಿ ಇತ್ಯರ್ಥಪಡಿಸಲಾಯಿತು.

4) ಭೂಮಾಲೀಕರು ಪ್ರಸ್ತಾಪಿಸಿದ ವಿವಿಧ ವಿಷಯಗಳನ್ನು, ವಿದ್ಯುಚ್ಛಕ್ತಿ ಕಾಯ್ದೆ-2003, ಟೆಲಿಗ್ರಾಫ್ ಕಾಯ್ದೆ-1885 ಮತ್ತು ಪವರ್ ಲೈನ್ ಅಳವಡಿಕೆಯ ಅವಶ್ಯಕತೆಯನ್ನು ಪರಿಗಣಿಸಿ ಟೆಲಿಗ್ರಾಫ್ ಕಾಯ್ದೆ 1885ರ ಸೆಕ್ಷನ್-16ರಂತೆ ಈ ಕೆಳಕಾಣಿಸಿದಂತೆ ಆದೇಶ ಮಾಡಲಾಗಿದೆ.

(ಎ) ನಾಲ್ಕು ಹಂತಗಳ ಪವರ್‌ಲೈನ್ ಅಳವಡಿಕೆಗೆ/ಟವರ್ ನಿರ್ಮಾಣಕ್ಕಾಗಿ ಈ ಕೆಳಕಾಣಿಸಿದಂತೆ ಪರಿಹಾರ ಧನ ನೀಡಲು ತೀರ್ಮಾನಿಸಲಾಯಿತು.

| ಕ್ರ. ಸಂ. | ಸ್ಟಕ್ಚರ್ ಕ್ಯಾಟಗರಿ | ವಿಸ್ತೀರ್ಣ | | ನಿಗದಿಪಡಿಸಲಾದ ಪರಿಹಾರದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | "ಎ" ಕ್ಯಾಟಗರಿ | 200 ಚದರ ಮೀಟರ್ | 0–02 ಗುಂಟೆ | 3.50 |
| 2 | "ಬಿ' ಕ್ಯಾಟಗರಿ | 246 ಚದರ ಮೀಟರ್ | 0–02½ ಗುಂಟೆ | 4.00 |
| 3 | "ಡಿ" ಕ್ಯಾಟಗರಿ | 300 ಚದರ ಮೀಟರ್ | 0–03 ಗುಂಟೆ | 5.00 |
| 4 | "ಇ" ಕ್ಯಾಟಗರಿ | 400 ಚದರ ಮೀಟರ್ | 0–04 ಗುಂಟೆ | 6.00 |

(ಬಿ) ಪವರ್ ಲೈನ್ ನಿರ್ಮಾಣದ ಹಾದಿಯಲ್ಲಿ ಬರುವ ಎಲ್ಲಾ ತರಹದ ಮರಗಳನ್ನು ಕ್ಲಾಸ್ 'ಎ' ಮರಗಳೆಂದು ಪರಿಗಣಿಸಿ ಸರ್ಕಾರ ಸುತ್ತೋಲೆ ಅನ್ವಯ

1. ಪ್ರತಿಯೊಂದು ತೆಂಗಿನ ಮರಕ್ಕೆ ರೂ.16,314/-
2. ಪ್ರತಿಯೊಂದು ಅಡಿಕೆ ಮರಕ್ಕೆ ರೂ.3,728/-
3. ಪ್ರತಿಯೊಂದು ಮಾವಿನ ಮರಕ್ಕೆ ರೂ.27,862/-
4. ಪ್ರತಿಯೊಂದು ಹಲಸಿನ ಮರ ರೂ.14,800/-
5. ಇತರೆ ಮರಗಳಿಗೆ ಸರ್ಕಾರ ನಿಗದಿಪಡಿಸಿದ ದರದಂತೆ ಪರಿಹಾರ ನೀಡುವ ಜೊತೆಗೆ ಶೇ.10% ರಷ್ಟು ಎಕ್ಸ್‌ಗ್ರೇಷಿಯ (ಇ) ಅನುದಾನ ಪೂರ್ವಕ ಪರಿಹಾರ ಪಾವತಿಸಲು

(ಸಿ) ಭೂಮಾಲೀಕರಿಗೆ ಹಾನಿಗೊಳಗಾಗುವ ಮರಗಳು, ಬೆಳೆಗಳಿಗೆ ನೀಡುವ ಪರಿಹಾರದ ಜೊತೆಗೆ ಪವರ್ ಲೈನ್ ಎಳೆಯುವ ಸಮಯದಲ್ಲಿ ಜಮೀನಿಗೆ ಆಗುವ ಹಾನಿ ಬಗ್ಗೆ ಪ್ರತಿ ಎಕರೆ ಜಮೀನಿಗೆ ಅಧಿಕ ಪರಿಹಾರವಾಗಿ ರೂ.2.00 ಲಕ್ಷಗಳು (ಎರಡು ಲಕ್ಷ ಮಾತ್ರ) ಪಾವತಿಸಲು

(ಡಿ) ಪವರ್ ಲೈನ್ ನಿರ್ಮಾಣ ಮತ್ತು ಪವರ್ ಲೈನ್ ಹಾದು ಹೋಗುವ ಜಮೀನಿನಲ್ಲಿ ಬರುವ ಬೋರ್‌ವೆಲ್‌ಗಳಿಗೆ ಹಾನಿಯಾದಲ್ಲಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಬೆಂಗಳೂರು ಗ್ರಾಮಾಂತರ ರವರ ಅಂದಾಜಿನಂತೆ ಸೂಕ್ತ ಪರಿಹಾರ ನೀಡಲು ಮೆ॥ಪವರ್ ಗ್ರಿಡ್ ಕಾರ್ಪೊರೇಷನ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

(ಇ) ಜಂಟಿ ಅಳತೆ ಪ್ರಮಾಣ ಪತ್ರ (ಜೆಎಂಸಿ)

1) ಮೆ॥ಪವರ್ ಗ್ರಿಡ್ ಕಾರ್ಪೊರೇಷನ್ ಇವರಿಂದ ಅಳವಡಿಸಲಾಗುತ್ತಿರುವ ಪವರ್‌ಲೈನ್ ಹಾದುಹೋಗುವ ಜಮೀನಿನ ಜಂಟಿ ಮೋಜಣಿ ಮಾಡಿಸಲು ಜಿಲ್ಲಾಧಿಕಾರಿಯವರ ಕಛೇರಿಯಿಂದ ತಂಡವನ್ನು ರಚಿಸಲಾಗುವುದು. ಆದ್ದರಿಂದ ಜಂಟಿ ಮೋಜಣಿಗೆ ನೇಮಕಗೊಂಡ ತಂಡದವರು ಬಂದಾಗ ಜಮೀನು ಮಾಲೀಕರುಗಳು ಅವರ ಜಮೀನಿನ ಸ.ನಂ., ವಿಸ್ತೀರ್ಣ, ಮರಗಳು, ಇತ್ಯಾದಿ ವಿವರಗಳನ್ನು ನೀಡಲು

2) ಜಂಟಿ ಮೋಜಣಿ ಕಾರ್ಯ ನಡೆಸಿದ ನಂತರ ಜೆ.ಎಂ.ಸಿ ಸರ್ಟಿಫಿಕೇಟ್, ಮಾಡತಕ್ಕದ್ದು ಇಲಾಖೆಗಳಿಂದ ನಿಗದಿತ ಪರಿಹಾರವನ್ನು ನಿಗದಿಪಡಿಸಿರುವ ದೃಢೀಕರಣ ಪತ್ರದ ಪ್ರತಿಗಳನ್ನು ಸಂಬಂಧಪಟ್ಟ ಜಮೀನಿನ ರೈತರಿಗೆ ನೀಡಿ ರೈತರಿಂದ ಈ ದಾಖಲೆಯನ್ನು ಪಡೆದಿರುವುದಕ್ಕೆ ಸ್ವೀಕೃತಿ ಪಡೆಯಲು

3) ಮೆ॥ಪವರ್ ಗ್ರಿಡ್ ಕಾರ್ಪೋರೇಷನ್ ಇವರು ಪವರ್ ಲೈನ್ ಅಳವಡಿಸುವ ಕಾರಿಡಾರ್ ಮಧ್ಯಭಾಗದಿಂದ ಎರಡೂ ಕಡೆ ನಿಗದಿತ ಅಳತೆಗೆ ಬೌಂಡರಿ ನಿಗದಿಪಡಿಸಿ ಗುರುತು ಮಾಡಲು

4) ಪವರ್ ಲೈನ್‌ಗಾಗಿ ನಿರ್ಮಾಣ ಮಾಡುವ ಸ್ಟ್ರಕ್ಚರ್ ಮತ್ತು ಪವರ್‌ಲೈನ್ ಹಾದುಹೋಗುವ ಜಮೀನಿನ ಮಾಲೀಕರೊಂದಿಗೆ ಜಮೀನಿನಲ್ಲಿಯೇ ಸಮಿತಿಯವರು ಛಾಯಚಿತ್ರಗಳನ್ನು ತೆಗೆಸಿಕೊಳ್ಳತಕ್ಕದ್ದು.

(ಎಫ್) ರೈತರಿಗೆ ಈ ಕೆಳಕಾಣಿಸಿದ ಮೂರು ಹಂತಗಳಲ್ಲಿ ಪರಿಹಾರ ಧನವನ್ನು ವಿತರಿಸಲು

ಹಂತ-1

ಪ್ರಥಮ ಹಂತದಲ್ಲಿ ಪವರ್‌ಲೈನ್ ಟವರ್ ನಿರ್ಮಾಣ ಮಾಡುವ ಸ್ಥಳಕ್ಕೆ ಸಂಬಂಧಿಸಿದ ಜಮೀನಿಗೆ ಮುಂಗಡವಾಗಿ ಕಂಡಿಕೆ 3(ಎ)ರಲ್ಲಿ ವಿವರಿಸಿರುವಂತೆ ಪರಿಹಾರ ನೀಡತಕ್ಕದ್ದು.

ಹಂತ-2

ಎರಡನೇ ಹಂತದಲ್ಲಿ ಮರಗಳು ಮತ್ತು ಬೆಳೆಗಳಿಗೆ ಪರಿಹಾರದ ಹಣ ಪಾವತಿಸತಕ್ಕದ್ದು.

ಹಂತ-3

ಮೂರನೆ ಹಂತದಲ್ಲಿ ಪವರ್‌ಲೈನ್ ಹಾದು ಹೋಗುವ ಜಮೀನಿನಲ್ಲಿನ ಬೆಳೆಗಳಿಗೆ ಮತ್ತು ಅಧಿಕ ಪರಿಹಾರ ಪಾವತಿಸಬೇಕಾದಲ್ಲಿ ಸದರಿ ಪರಿಹಾರ ಪಾವತಿಸತಕ್ಕದ್ದು.

ಈ ಮೇಲೆ ವಿವರಿಸಿರುವಂತೆ ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕು 400 ಕೆ.ವಿ & 765 ಕೆವಿ ಪವರ್ ಲೈನ್ ಹಾದು ಹೋಗುವಲ್ಲಿ ಬರುವ ಜಮೀನು ರೈತರಿಗೆ ನಿಯಮಾನುಸಾರ ನಿಗದಿ ಪಡಿಸಿರುವ ಪರಿಹಾರ ಹಣವನ್ನು ನೀಡಲು ಈ ಮೂಲಕ ಸೂಚಿಸಿ ಆದೇಶಿಸಿದೆ.

ಜಿಲ್ಲಾಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ

ಪ್ರತಿಯನ್ನು:

1) AGM, Power Grid Corporation of India Ltd., Yeshwanthpur, Bangalore.
2) ಪೊಲೀಸ್ ಅಧೀಕ್ಷಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3) ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ.
4) ತಹಸೀಲ್ದಾರ್, ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲ್ಲೂಕು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5) ಸಂಬಂಧಪಟ್ಟ ರೈತರಿಗೆ.
6) ಕಛೇರಿ ಪ್ರತಿ.